

# ಜಾಹ್ನವಿಯ ಸಂಭ್ರಮ

ಅಮಿತಾಭ್ ಬಚ್ಚನ್ ನಟಿಸಿ ಸೂಪರ್‌ಹಿಟ್ ಆದ ಇನ್ನೊಂದು ಹಳೇ ಚಿತ್ರ– ದೋಸ್ತಾನಾ. ಇದೇ ಚಿತ್ರದ ಎರಡನೇ ಭಾಗ 'ದೋಸ್ತಾನಾ 2' ಮೊದಲ ಹಂತದ ಶೂಟಿಂಗ್ ಚಂಡೀಗಢ ಮತ್ತು ಪಾಟಿಯಾಲದಲ್ಲಿ ಮುಕ್ತಾಯ ಕಂಡಿದೆ. ಕರಣ್ ಜೋಹರ್‌ನ ಈ ಚಿತ್ರದಲ್ಲಿ ಕಾರ್ತಿಕ್ ಆರ್ಯನ್ ಜೊತೆಗೆ ಹೀರೋಯಿನ್ ಆಗಿ ನಟಿಸುತ್ತಿರುವ ಜಾಹ್ನವಿ ಕಪೂರ್, ತನ್ನ ಪಾತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾಳೆ. 2008ರಲ್ಲಿ ತೆರೆಗೆ ಬಂದ 'ದೋಸ್ತಾನಾ'ದ ಹಾಡುಗಳೂ ಸೂಪರ್‌ಹಿಟ್ ಆಗಿದ್ದವು. ಹೊಸ 'ದೋಸ್ತಾನಾ'ದಲ್ಲಿ ಹೊಸ ಮುಖ ಲಕ್ಷ್ಯ ಸೇರ್ಪಡೆಗೊಂಡಿರುವುದು ವಿಶೇಷ.

ಕರಣ್ ಜೋಹರ್‌ನ 'ತಖ್ತ್' ಚಿತ್ರದಲ್ಲಿ ಪ್ರಮುಖ ಪಾತ್ರವೊಂದನ್ನು ನಿರ್ವಹಿಸುತ್ತಿರುವ ಜಾಹ್ನವಿ, 'ರೂಹ್ ಅಫ್ಜಾ' ಎನ್ನುವ ಹಾರರ್ ಮತ್ತು ಕಾಮಿಡಿ ಚಿತ್ರದಲ್ಲಿ ರಾಜ್‌ಕುಮಾರ್ ರಾವ್‌ಗೆ ಜೊತೆಯಾಗಿದ್ದಾಳೆ. 'ತಖ್ತ್'ನಲ್ಲಿ ಕರೀನಾ, ಅಲಿಯಾ ಮತ್ತು ಭೂಮಿ ಕೂಡಾ ಜೊತೆಯಾಗಿ ನಟಿಸುತ್ತಿರುವುದರಿಂದ ಜಾಹ್ನವಿಗೆ ನಟನೆಯ ಸಾಕಷ್ಟು ಪಾಠಗಳು ಸಿಕ್ಕಿವೆಯಂತೆ. ಮಲ್ಟಿಸ್ಟಾರ್ ಚಿತ್ರಗಳಲ್ಲಿ ಎಳೆಯ ಹೀರೋಯಿನ್‌ಗಳು ಗಮನ ಸೆಳೆಯುವುದು ಕಡಿಮೆಯೇ. ವಯಸ್ಸಿನಲ್ಲಿ ಈ ಮೂವರಿಗಿಂತಲೂ ಚಿಕ್ಕವಳಾಗಿರುವ ಜಾಹ್ನವಿ ತನ್ನ ಪಾತ್ರವನ್ನು ಸವಾಲಾಗಿ ಸ್ವೀಕರಿಸಿದ್ದಾಳಂತೆ. ವರುಣ್ ಧವನ್ ಜೊತೆಗೆ ಮೊದಲ ಬಾರಿ ನಟಿಸುತ್ತಿರುವ 'ರಣ್‌ಭೂಮಿ' ಚಿತ್ರ ಕೂಡಾ ಜಾಹ್ನವಿಗೆ ಉತ್ಸಾಹ ತುಂಬಿದೆ.

'ಮುಂದಿನ ವರ್ಷ ನನ್ನ ಅದೃಷ್ಟದ ವರ್ಷ. ಒಂದರ ಹಿಂದೆ ಒಂದರಂತೆ ನಾಲ್ಕು ಚಿತ್ರಗಳು ಬಿಡುಗಡೆಯಾಗಲಿವೆ' ಎಂದು ಸಂಭ್ರಮ ಹಂಚಿಕೊಂಡಿದ್ದಾಳೆ ಜಾಹ್ನವಿ. ಈ ಮಧ್ಯೆ 'ದೋಸ್ತಾನಾ–2'ರ ದೆಹಲಿ ಶೂಟಿಂಗ್ ಮುಂದಕ್ಕೆ ಹೋಗಿದೆ. ದೆಹಲಿಯ ಹವಾಮಾನ ಹದಗೆಟ್ಟಿರುವುದು ಇದಕ್ಕೆ ಕಾರಣ. ■

# ಫಿಟ್ ಕತ್ರೀನಾ



ಹೊಸ ಚಿತ್ರ 'ಸೂರ್ಯವಂಶಿ' ಬಗ್ಗೆ ಕತ್ರೀನಾ ಸಖತ್ ಥ್ರಿಲ್ ಆಗಿದ್ದಾಳೆ. ಏಕೆಂದರೆ, ರೋಹಿತ್ ಶೆಟ್ಟಿ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಸಾಹಸ ದೃಶ್ಯಗಳಿಗೆ ಬರವಿಲ್ಲವಂತೆ. ಚಿತ್ರದಲ್ಲಿ ಅಕ್ಷಯ ಕುಮಾರ್ ನಾಯಕನಾಗಿ ನಟಿಸುತ್ತಿರುವುದು ಕತ್ರೀನಾ ಥ್ರಿಲ್‌ಗೆ ಇನ್ನೊಂದು ಕಾರಣ. ಈ ಹಿಂದೆ 'ನಮಸ್ತೆ ಲಂಡನ್' ಚಿತ್ರದಲ್ಲಿ ಇಬ್ಬರೂ ಜೋಡಿಯಾಗಿ ನಟಿಸಿದ್ದರು.

ಹೊಸ ತಲೆಮಾರಿನ ಹೀರೋಯಿನ್‌ಗಳಿಂದ ಇತ್ತೀಚೆಗೆ ದೊಡ್ಡ ಪೈಪೋಟಿ ಎದುರಿಸುತ್ತಿರುವ ಕತ್ರೀನಾ, ತನ್ನ ವಯಸ್ಸು ಗೊತ್ತಾಗದಂತೆ ಇವತ್ತಿಗೂ ಮೈಮಾಟ ಕಾಪಾಡಿಕೊಂಡು ಬರಲು ಕಾರಣ ಆಕೆಯ ಕಠಿಣ ಜಿಮ್ ಅಭ್ಯಾಸ. ಇತ್ತೀಚೆಗೆ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ತನ್ನ ಎಕ್ಸರ್‌ಸೈಸ್ ಚಿತ್ರವೊಂದನ್ನು ಅಪ್‌ಲೋಡ್ ಮಾಡಿರುವ ಆಕೆ, ಅಭಿಮಾನಿಗಳಿಂದ ಭಾರೀ ಪ್ರಶಂಸೆ ಪಡೆದಿದ್ದಾಳೆ. ಪುಶಪ್, ಜಂಪ್, ಸ್ಕ್ವಾಟ್, ಡೆಡ್ ಲಿಫ್ಟ್– ಹೀಗೆ ಎಲ್ಲವನ್ನೂ ದಿನವೂ ಬಿಡದಂತೆ ಮಾಡುತ್ತಿರುವ ಕತ್ರೀನಾ, ರೋಹಿತ್ ಶೆಟ್ಟಿಯ ಅಭಿಮಾನಿಯೂ ಹೌದಂತೆ.

ಈ ಮಧ್ಯೆ ರೋಹಿತ್ ಶೆಟ್ಟಿ ನಿರ್ಮಿಸುತ್ತಿರುವ ಹೊಸ ಚಿತ್ರವೊಂದನ್ನು ಫರಾಹ್ ಖಾನ್ ನಿರ್ದೇಶಿಸುತ್ತಿರುವ ಸುದ್ದಿ ಬಂದಿದೆ. 1982ರಲ್ಲಿ ಸೂಪರ್ ಹಿಟ್ ಆದ ಅಮಿತಾಭ್ ಅಭಿನಯದ 'ಸತ್ತೇ ಪೆ ಸತ್ತ' ಚಿತ್ರದ ಕಥೆಯನ್ನೇ ಫರಾಹ್ ಮತ್ತೆ ಹೊಸದಾಗಿ ಹೇಳುತ್ತಿದ್ದಾಳಂತೆ. ಅಮಿತಾಭ್ ಜೊತೆಗೆ ಆಗ ಹೇಮಮಾಲಿನಿ ನಾಯಕಿ ಆಗಿದ್ದುದು ದೊಡ್ಡ ಸುದ್ದಿಯಾಗಿತ್ತು. ಹೊಸ ಚಿತ್ರಕ್ಕೆ ಶಾರೂಕ್ ಅಥವಾ ಹೃತಿಕ್ ನಾಯಕರಾಗಲಿದ್ದಾರೆ ಎನ್ನಲಾಗುತ್ತಿದೆ. ಹೃತಿಕ್ ಈಗಾಗಲೆ, 'ಗೊತ್ತಿಲ್ಲ, ಹಾಗೆಂದು ಸುದ್ದಿ ಇದೆ. ಅಮಿತಾಭ್ ಶೂಗಳಲ್ಲಿ ನನ್ನ ಕಾಲು ತೂರಿಸುವ ಅವಕಾಶ ಸಿಕ್ಕಿದರೆ ನಾನಂತೂ ಖಂಡಿತಾ ಬಿಡುವುದಿಲ್ಲ' ಎಂದಿದ್ದಾನೆ. ಶಾರೂಕ್ ಪ್ರತಿಕ್ರಿಯೆ ನೀಡಿಲ್ಲ.

ಈ ಚಿತ್ರಕ್ಕೆ ನಾಯಕಿಯಾಗಿ ಕತ್ರೀನಾ ಆಯ್ಕೆಯಾಗಿದ್ದಾಳೆಂದೂ ಸುದ್ದಿ ಹಬ್ಬಿದೆ. ಇನ್ನೊಂದು ಮೂಲದ ಪ್ರಕಾರ, ಅನುಷ್ಕ ಶರ್ಮಾಳ ಹೆಸರೂ ಹರಿದಾಡುತ್ತಿದೆ. ಫರಾಹ್‌ಳನ್ನೇ ಪತ್ರಕರ್ತರು ಕೇಳಿದಾಗ, 'ಜನ ಊಹಿಸಲಿ ಬಿಡಿ. ರೋಹಿತ್ ಜೊತೆಗೆ ಕುಳಿತುಕೊಂಡು ಚರ್ಚಿಸಿದ ಬಳಿಕ ಎಲ್ಲ ಫೈನಲ್ ಆಗುತ್ತೆ. ಆತ 'ಸೂರ್ಯವಂಶಿ' ಚಿತ್ರದ ಅಂತಿಮ ಹಂತದ ಶೂಟಿಂಗ್‌ನಲ್ಲಿ ಬ್ಯುಸಿ ಆಗಿದ್ದಾನೆ' ಎಂದಿದ್ದಾಳೆ. ರೋಬ್ ಕೊಹೆನ್ ನಿರ್ದೇಶಿಸುತ್ತಿರುವ 'ಜುವೆಲ್ ಆಫ್ ಇಂಡಿಯಾ' ಕತ್ರೀನಾ ಸಹಿ ಹಾಕಿರುವ ಇನ್ನೊಂದು ಚಿತ್ರ. ಈ ಮಧ್ಯೆ ತನಗಿಂತ ಕಿರಿಯ ವರುಣ್ ಧವನ್ ಜೊತೆಗೂ ಚಿತ್ರವೊಂದರಲ್ಲಿ ನಟಿಸಲು ಕತ್ರೀನಾ ಒಪ್ಪಿಕೊಂಡಿದ್ದು, ಅದನ್ನು ರೆಮೊ ಫೆರ್ನಾಂಡಿಸ್ ನಿರ್ದೇಶಿಸಲಿದ್ದಾನಂತೆ.

■ ಬಿಂದು